ಸಿದ್ಲಿಂಗನು ನಡುಗುತ್ತಿರುವ ಗೌರಿಯನ್ನು ಕೈ ಹಿಡಿದು ತನ್ನ ಬಳಿ ಕುಳ್ಳಿರಿಸಿಕೊಂಡನು.

ಅವಳ ಚೆಲುವನ್ನು ಆಸ್ವಾದಿಸುತ್ತಾ ಸಿದ್ಲಿಂಗನು ಗೌರಿಯನ್ನು ತನ್ನ ಬಾಹುಗಳಿಂದ ಬಳಸಿ ಅವಳ ಮೊಗವನ್ನೆತ್ತಿ ಕಣ್ಣಲ್ಲಿ ಕಣ್ಣು ನೆಟ್ಟು ನೋಡಲು ತವಕಿಸುತ್ತ ಇನ್ನೇನು ಚೆಲ್ನುಡಿಗಳಿಂದ ಅವಳನ್ನು ಓಲೈಸಬೇಕೆಂಬ ಆತುರದಲ್ಲಿ ಇರುವಾಗ...

ಥಟ್ಟನೆ ಕೈ ಕೊಸರಿಕೊಂಡ ಗೌರಿಯು ಅವನ ಪಾದಾರವಿಂದಗಳ ಮೇಲೆ ತನ್ನ ಕಣ್ಣೀರಿನಿಂದ ಅಭಿಷೇಕ ಮಾಡತೊಡಗಿದಳು. ಗಲಿಬಿಲಿಗೊಳಗಾದ ಸಿದ್ಲಿಂಗನು, ''ಹೇ! ಯಾಕೆ ಚಿನ್ನಾ! ನಿನ್ನ ಸ್ಥಾನ ಅಲ್ಲಿ ಇಲ್ಲ. ನೀನು ನನ್ನದೆಯ ಹೊನ್ನಾಡನ್ನಾಳುವವಳು. ಏಳು!'' ಎಂದು ಅವಳ ಮೃದುವಾದ ಮೈ ಹಿಡಿದು ಎಬ್ಬಿಸ ಹೋದನು. ಅವನ ಪ್ರಯತ್ನವನ್ನು ವಿಫಲಗೊಳಿಸಿದ ಗೌರಿ ಅಳಲುಪಕ್ರಮಿಸಿದಳು. ಅವಳ ರೋದನದ ದನಿ ಕೇಳುತ್ತಲೇ ಸಿದ್ಲಿಂಗನ ಮುಖ ವಿವರ್ಣವಾಯಿತು.

'ಇದು ಯಾರ ದನಿ? ಗೌರಿಯದ್ದೆ? ಇವಳ ದನಿ ಹೀಗೇಕೆ ಇದೆ? ಗಡುಸಾಗಿ ಗಂಡಸಿನ ದನಿಯ ಹಾಗಿದೆ? ನನ್ನ ಕಿವಿಗಳೇನಾದರೂ ನನಗೆ ಮೋಸಮಾಡುತ್ತಿಲ್ಲವಷ್ಟೆ?' ಎಂಬಿತ್ಯಾದಿ ಪ್ರಶ್ನಾಪ್ರವಾಹದಿಂದ ತತ್ತರಿಸಿಹೋದ ಸಿದ್ಲಿಂಗನು ಗೌರಿಯನ್ನು ಹಿಡಿದಿದ್ದ ತನ್ನ ಕೈಗಳನ್ನು ಹಿಂತೆಗೆದುಕೊಂಡನು.

ಸಿದ್ಲಿಂಗನು ತನ್ನನ್ನು ಹಿಡಿದಿದ್ದ ಕೈ ಸಡಿಲಿಸಿದ ಅನುಭವವಾದೊಡನೆ ಗೌರಿ ಅಳುತ್ತಲೇ, ''ನನ್ನನು ಕ್ಷಮಿಸ್ರಿ. ನಾನು ಪಾಪಿ. ನಿಮಗೆ ಮೋಸ ಮಾಡಿದೆ. ನಾನು ಹುಟ್ಟಿದಾಗಿಂದಲೂ ಹೀಗೆ ಇದ್ದೇನೆ. ನನ್ನನ್ನು ಹೆತ್ತವ್ರು ತಮ್ಮ ಕನ್ಯಾಸೆರೆ ಬಿಡಿಸ್ಕೊಳ್ಳಬೇಕು ಅಂತ ನನ್ನ ಬಗ್ಗೆ ಮುಚ್ಚಿಟ್ಟು ನಿಮ್ಮ ಜೊತೆ ಮದುವೆ ಮಾಡಿದ್ರು. ಇದ್ರಲ್ಲಿ ನನ್ನದೇನೂ ತಪ್ಪಿಲ್ಲ'' ಎಂದೆಲ್ಲಾ ವಿಲಪಿಸಿದಳು(ನು).

ಗಂಡುದನಿಯಲ್ಲಿದ್ದ ಅವಳ ಮಾತುಗಳು ಬರುತ್ತಿರಲು ಸಿದ್ಲಿಂಗನ ಕಿವಿಗಳಿಗೆ ಕಾದಸೀಸ ಸುರಿದಂತೆ ಭಾಸವಾಯಿತು. ದುಃಖ, ನಿರಾಶೆ, ಮೋಸಹೋದ ಭಾವ ಮುಂತಾದ ನೂರೆಂಟು ಭಾವನೆಗಳು ಅವನೆಡೆಗೆ ದಾಂಗುಡಿ ಇಟ್ಟವು. 'ಹಾಗಾದ್ರೆ! ಹಾಗಾದ್ರೆ! ಗೌರಿ ಅವಳಲ್ಲ, ಅವನು! ನಾನು ಮದುವೆಯಾಗಿದ್ದು ತೃತೀಯ ಲಿಂಗಿಯೊಬ್ಬಳನ್ನೇ? ಅಯ್ಯೋ ದುರ್ವಿಧಿಯೆ! ಇದೇನಾಗಿ ಹೋಯ್ತು!'

ಗೌರಿ ಅಳುತ್ತ, ''ದಯವಿಟ್ಟು ನಾನು ಹೀಗೆ ಅಂತ ಯಾರಿಗೂ ಹೇಳ್ಬೇಡ್ರಿ. ನಾನು ಜೀವನಪೂರ್ತಿ ನಿಮ್ಮ ಮನೆ ಕಸ ಮುಸುರೆ ಮಾಡಿಕೊಂಡು ನಿಮ್ಮ ಚರಣದಾಸಿಯಾಗಿ ನಿಮ್ಮ ಮನೆ ಮೂಲೆಯಲ್ಲಿ ಬಿದ್ದಿರುತ್ತೇನೆ. ನಿಮಗೆ ಯಾವುದೇ ರೀತಿಯಲ್ಲೂ ತೊಂದರೆ ಕೊಡೋದಿಲ್ಲ...'' ಮುಂತಾಗಿ ಹೇಳುತ್ತಲೇ ಇದ್ದಳು(ನು).

ನಡೆದುದು ಏನೆಂಬುದುದರ ಅರಿವು ಮೂಡುತ್ತಿದ್ದಂತೆ ಸಿದ್ಲಿಂಗು ಅಕ್ಷರಶಃ ಭೂಮಿಗಿಳಿದು ಹೋದನು.

'ನಾ ನಿನ್ನ ಬಿಡಲಾರೆ' ಎಂಬಂತೆ ಬಲವಾಗಿ ತನ್ನ ಕಾಲುಗಳನ್ನು ಹಿಡಿದಿದ್ದ ಗೌರಿಯನ್ನು ತನ್ನೆಲ್ಲಾ ಶಕ್ತಿಯನ್ನುಪಯೋಗಿಸಿ ದೂರ ತಳ್ಳಿದ ಸಿದ್ಲಿಂಗನು, ''ಮೋಸ! ಮೋಸ'' ಎಂದರಚುತ್ತಾ ಕೋಣೆಯ ಬಾಗಿಲು ತೆಗೆದು ಪೋಲಿಯೋ ಪೀಡಿತ ತನ್ನ ಎಡಗಾಲನ್ನು ಎಳೆಯುತ್ತಾ ಹೊರಗೆ ಓಡಿದನು.

★★★

ಈ ರೀತಿಯಾಗಿ ಪ್ರಥಮರಾತ್ರಿಯಂದೆ ಸಿದ್ಲಿಂಗು ಓಡಿಹೋದ ಮೇಲೆ, ಮದುವೆ ಮನೆಯಲ್ಲಿ ಅಲ್ಲೋಲಕಲ್ಲೋಲ ಎದ್ದಿತು. ಮುಂದಿನ ಕೆಲವು ಕ್ಷಣಗಳಲ್ಲೇ ಅಯೋಮಯ ತಿಳಿಯಾಗಿ ಸ್ಥಿತಿ ತಹಬದಿಗೆ ಬಂದು ನೆರೆದ ಸಕಲರಿಗೂ 'ಹೀಗೆ ಹೀಗೆ' ಅನ್ನೋ ವಾಸ್ತವ ಚಿತ್ರಣ ದೊರಕಿ, ಮೊದಮೊದಲು ಆಘಾತ ನಂತರ ಮರುಕ, ಅಪಹಾಸ್ಯ, ದುಃಖ ಮುಂತಾದ ಅನೇಕ ಭಾವಗಳು ಕಾರಂಜಿಯ ತೆರದಿ ಚಿಮ್ಮಿದವು.